ಎಂ.ಬಿ.ಖೋದಾನಪೂರ, ಸವದತ್ತಿ
ಯಾರೂ ಕಲಿಸದೆ ತಾನಾಗಿಯೇ ಬರುವ ಮಹತ್ವದ ಕೆಲಸ ಯಾವುದು?



ಉಸಿರಾಟ!

ಕೇಶವ ಎನ್ ಪೈ, ಹೊನ್ನಾವರ
ಕೋರ್ಟು, ಕಚೇರಿಗಳಲ್ಲಿ ಗಾಂಧೀಜಿಯ ಫೋಟೋ ಏಕೆ ಹಾಕಿರುತ್ತಾರೆ?
ಸತ್ಯ, ಅಹಿಂಸೆಗಳನ್ನೂ ಹೀಗೆಯೇ ಚೌಕಟ್ಟಿನ ಒಳಗಡೆ ಬಂಧಿಸಲಾಗಿದೆ ಎಂದು ಸೂಚಿಸಲು!

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ
ಮತದಾರರು ಬಿಳಿಯ ಹಾಳೆ ಇದ್ದಂತೆ. ಚುನಾವಣೆ ಲೇಖನಿ ಇದ್ದಂತೆ. ಮತದಾನ?
ಮತದಾರ ಬರೆಯುವ ಟ್ರಾಜಿಕ್ ಸಸ್ಪೆನ್ಸ್ ಸ್ಟೋರಿ!

ಸುನಂದಮ್ಮ, ಗೌರಿಬಿದನೂರು
ಆಕಾಶ ನೋಡಲು ನೂಕುನುಗ್ಗಲು ಪರಿಸ್ಥಿತಿ ಯಾವಾಗ ಬರುತ್ತೆ?
Air show ನಡೆದಾಗ!

ಸವಿರವಿ, ಕೊಪ್ಪ
ಮಧುಮೇಹ ಇರುವ ಮನುಷ್ಯನಿಗೆ ಸೊಳ್ಳೆ ಕಚ್ಚಿದರೆ ಅದಕ್ಕೂ ಮಧುಮೇಹ ಬರುತ್ತಾ?
ಮನುಜನಿಗೆ ಹಂದಿ ಜ್ವರ, ಕೋಳಿ ಜ್ವರ



ಇತ್ಯಾದಿ ಬರುತ್ತವೆ ಆದರೆ ಯಾವ ಪ್ರಾಣಿಗೂ ಮನುಷ್ಯಜ್ವರ ಬಂದ ದಾಖಲೆ ಇಲ್ಲ! ರೋಗಗಳ ದಾರಿ ಒನ್ ವೇ!

ಗೌರಿ ಶೇಷಾದ್ರಿ, ಉತ್ತನಹಳ್ಳಿ
ಹೆಣ್ಣಿಗೆ ಮದುವೆ ಅನಿವಾರ್ಯವೆ?
ಸ್ವಾವಲಂಬಿ ಹೆಣ್ಣಿಗೆ ಅನಿವಾರ್ಯವಲ್ಲ ನಿಜ. ಆದರೆ ಜೀವನದಲ್ಲಿ ಗೋಳುಹೊಯ್ದುಕೊಳ್ಳಲಾದರೂ ಒಂದು ಜೀವ ಇದ್ದರೆ ಚೆನ್ನವಂತೆ!

ಕೆ.ಎನ್.ನಾರಾಯಣರೆಡ್ಡಿ, ಕೆ.ಜಿ.ಎಫ್
ಬುದ್ಧ ಪ್ರಪಂಚದ ದುಃಖ ದುಮ್ಮಾನಗಳನ್ನು ಒಮ್ಮೆ ಮಾತ್ರ ನೋಡಿ ಪರಿವರ್ತಿತನಾದ. ಪ್ರತಿದಿನ ನೋಡುವ ನಾವು ಏಕೆ ಬದಲಾಗುತ್ತಿಲ್ಲ?
ಬುದ್ಧ ಪ್ರಬುದ್ಧ, ನಾನು ನೀವು ತಳ್ಳಿದರೂ ಅದೇ ಮಾರ್ಗ ಹಿಡಿಯುವ ಗೊದ್ದ!

ಹಾಡ್ಯ ಜಯಾನಂದ, ಮೈಸೂರು
ದ್ವಾಪರದಲ್ಲಿ ಒಬ್ಬ ಶಕುನಿ ಇದ್ದ. ಈಗ?
ನಾವೇ 542 ಜನರನ್ನು ಆರಿಸಿಲ್ಲವೇ! ಅದಲ್ಲದೆ ಪ್ರತಿ ರಾಜ್ಯದಲ್ಲೂ ಅಷ್ಟಷ್ಟು ಕೊಸರು ಬೇರೆ!

ಡಿ.ಎಸ್.ಪಂಕಜಸುಬ್ರಮಣ್ಯಂ, ಬೆಂಗಳೂರು
ಅಂದು ಏಳೇಳು ಜನ್ಮಕ್ಕೂ ನೀನೇ ಪತಿ ಎನ್ನುತ್ತಿದ್ದರು. ಈಗ ಏಳು ತಿಂಗಳಿಗೆ ಒಬ್ಬ ಪತಿಯನ್ನು ಬಯಸುವರಲ್ಲಾ?
ತಿಂಗಳಿಗೇ ಸಂಬಂಧ ತಂಗಳಾದರೆ ಏಳೇಳು (ಏಳು, ಏಳು) ಎನ್ನುವುದು ಸಹಜವೇ!

ಸಿ.ಕೆ.ಗಂಗೇಗೌಡ, ಮಂಡ್ಯ
ವರದಕ್ಷಿಣೆ ಆಫರ್ ಒಪ್ಪಿ ಮದುವೆ ಮಾಡಿಕೊಳ್ಳುವ ಹುಡುಗರು ಲೋಫರ್ ಪಟ್ಟಿಗೆ ಸೇರುತ್ತಿದ್ದಾರಲ್ಲಾ...?
ಪಾಪ! ಆ ಕಾಫಿರ್‌ಗಳಿಗೆ ತಮ್ಮ Coffin ತುಂಬಿಸಿಕೊಳ್ಳಲು ತಿಳಿದಿರುವುದು ಇದೊಂದೇ ಮಾರ್ಗವಂತೆ!

ಸುಧಾ ವಿ, ಕಾಚರಕನಹಳ್ಳಿ
ಬಹುತೇಕ ಬೆತ್ತಲೆಯಾಗಿ, ನಮ್ಮ ಸಂಸ್ಕೃತಿಯ ಮೇಲೆ ಅಕ್ಕರೆ ಇದೆ ಎನ್ನುವ ತಾರೆಯರ ದ್ವಂದ್ವಕ್ಕೇನು ಉತ್ತರ?
ಆದರೂ ಹಣಕ್ಕಾಗಿ ಬೆತ್ತಲೆ, ಸರಿದಿಕ್ಕಿನಲ್ಲಿಹುದು ಗುಣವಂತ ತಲೆ!

ಎಂ.ಜಿ.ನೇಹರ್ವಣೆ, ಬಳ್ಳಾರಿ
ಸಂಸ್ಕೃತಿ, ನಾಗರಿಕತೆಗೆ ಏನು ವ್ಯತ್ಯಾಸ?
ಸಂಸ್ಕೃತಿ ಅಶ್ವತ್ಥವೃಕ್ಷ, ನಾಗರಿಕತೆ ಕಟ್ಟೆ. ಕಟ್ಟೆ ಬದಲಾದರೂ ಮರ ಬದಲಾಗಬಾರದು!

ರಮೇಶ್, ಹನುಮನಾಳು
ಮನೆಯೇ ಮಂತ್ರಾಲಯವಂತೆ. ಮಡದಿ, ಮಕ್ಕಳು?
ಮಂಗಳಾರತಿ ಮಾಡುವವಳೇ ಮಡದಿ, ಜಾಗಟೆ ಬಾರಿಸುವವರೇ ಮಕ್ಕಳು.

ಗಾಯತ್ರಿ, ರಾಜಾಜಿನಗರ
ಸಕಲವೂ ಇದ್ದರೂ ಮನಸ್ಸು ಯಾವಾಗಲೂ ಭಣಭಣಗುಟ್ಟುತ್ತಿದೆಯಲ್ಲಾ...?
ಪೂರ್ವಜನ್ಮದ ವಾಸನೆಯದು. ಹೋದ ಜನ್ಮದಲ್ಲಿ ನೀವು ಮಂತ್ರಿಯಾಗಿದ್ದಿರಂತೆ!

## ಬಹುಮಾನಿತ ಪ್ರಶ್ನೆ

ಜಾಕೋಬ್ ಡಿಸೋಜ, ತೀರ್ಥಹಳ್ಳಿ
ಪರಮಸುಖ ಯಾವುದು ಸಾರ್?
ಯಾವುದೇ ಮೆಗಾಸೀರಿಯಲ್‌ಗೆ ಅಂಟಿಕೊಳ್ಳದೆ ಬದುಕು ಸಾಗಿಸುವುದು!

ಆರ್.ವಿಜಯಲಕ್ಷ್ಮಿ, ಕೊಳ್ಳೇಗಾಲ
ಗೌಡರ ಕಣ್ಣೀರು ಈಗ ಬರಿದಾಗಿದೆಯಂತೆ?
ಸದಾ ಹರಿಯಲು ಅದೇನು ಗಂಗೆಯೇ? ಚುನಾವಣಾ ವರ್ಷಕ್ಕೆ ತುಂಬುವ ಕುಂಟೆಯದು!

ಪ್ರೆಸ್ ಶೇಖರ್, ಗೌರಿಬಿದನೂರು
ಅಕಸ್ಮಾತ್ ದುಡ್ಡಿನ ಗಿಡಗಳು ಇದ್ದಿದ್ದರೆ ಪ್ರಪಂಚದಲ್ಲಿ ಬೇರ್‍ಯಾವ ಗಿಡ ಮರಗಳೂ ಇರುತ್ತಿರಲಿಲ್ಲವೇನೋ...?
ಹೊಟ್ಟೆಗೆ ಬೇಕಾದ ಮರಗಿಡಗಳು ಇರಲೇಬೇಕಿತ್ತು ಬಿಡಿ. ಉದರಕ್ಕೆ ನಾಣ್ಯ ನಗಣ್ಯ!

ಬಿ.ಆರ್.ಮನೋಹರ, ಬೆಂಗಳೂರು
ಥಿಯೇಟರ್‌ನಲ್ಲಂತೂ ಏನೂ ಇರಲಿಲ್ಲ, ಈಗ ಭಿತ್ತಿಪತ್ರಕ್ಕೂ ಕತ್ತರಿ ಬಿತ್ತಲ್ಲಾ...?
ಎಂಟಿವಿ, ಎಫ್‌ಟಿವಿ, ನೆಟ್‌ಗಳಿರುವಾಗಲೂ ಭಿತ್ತಿ ಕಾಂಬುವರ ಚಿತ್ತ ಕೆಟ್ಟಿಪುದು ಎಂಬರೈ ಮನೋಹರ!

ಜೆ.ಸುಬ್ಬನಾಯಕ, ಬೊಮ್ಮಲಾಪುರ
ಹುಟ್ಟು, ಸಾವಿಗೆ ಒಂದೇ ದಾರಿ. ಬಾಳಿಗೆ?
ಇರಿ, ಇರಿ. ಹುಟ್ಟು ಸಾವಿಗೆ ಒಂದೇ ದಾರಿ ಎಂದು ಯಾರು ಹೇಳಿದರು? ಹುಟ್ಟಿಗೆ ಬೇಕಾದ್ದು ಗಂಡ, ಸಾವಿಗೆ ಯಮಗಂಡ!

ಜೆ.ಆರ್.ಆದಿನಾರಾಯಣಮುನಿ, ಆದಿವಾಲ
ಹಿಂಸೆ ಮತ್ತು ಚಿತ್ರಹಿಂಸೆಗಳ ಅರ್ಥವೇನು?
ಚುನಾವಣೆಯ ಮುನ್ನ ಅಭ್ಯರ್ಥಿ ವೋಟಿಗಾಗಿ ಬೇಡುವುದು ಹಿಂಸೆ, ಗೆದ್ದನಂತರ ನೀಡುವುದು ಚಿತ್ರಹಿಂಸೆ!

ಮುರಲೀಧರ ಕುಲಕರ್ಣಿ, ಬೀದರ
ಕಪ್ಪುಹಣವನ್ನು ಸ್ವೀಕರಿಸುವ ತಿರುಪತಿಯ ತಿಮ್ಮಪ್ಪ ಅನ್ಯಾಯವನ್ನು ಬೆಂಬಲಿಸಿದಂತಾಗುವುದಿಲ್ಲವೇ?



ಅಲ್ಲಿ ಬಿದ್ದ ತಕ್ಷಣ ಅದು ಅಕೌಂಟ್‌ಗೆ ಬಂತಲ್ಲ! ನಮ್ಮಲ್ಲಿ ದೇವನು ಒಂದು Sin clenser ಅಷ್ಟೆ!

■ ರಾಮ್